ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.778/2022

ದಿನಾಂಕ: **07.04.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯವಿಚಾರಣೆ: ಮಾನ್ಯ ಎ ಪಿ ಪಿ ಅವರಿಂದ:

ನಿಪಿ81 ರ ಸಮಯದಲ್ಲಿ ವಶಪಡಿಸಿಕೊಂಡ ಬಿ ಓ ಜರ್ನಲ್ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ90 ಎಂದು ಗುರುತಿಸಲಾಯಿತು. ನಿಪಿ84ರ ಸಮಯ ಆರ್ ಎಫ್ ಎಸ್ ಎಲ್ ಗಾಗಿ ಗುರುತು ನೀಡಿರುವ ದಾಖಲೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಗಳನ್ನು ಈಗಾಗಲೆ ನಿಪಿ3-12 ಎಂದು ಗುರುತಿಸಲಾಗಿದೆ. ನಿಪಿ84ರಲ್ಲಿ ಗುರುತಿಸಲಾಗಿರುವ ಹೆಚ್ ಜೆ ಕೆ ಎಲ್ ಎಂ ಎನ ಪಿ ಆರ್ ಎಸ ಎನ್ನುವ ಪುಸ್ತಕಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದುಸದರಿ ದಾಖಲೆಗಳನ್ನು ಈಗಾಗಲೇ ನಿಪಿ13 ರಿಂದ 19 ಹಾಗೂ ನಿಪಿ72 ಎಂದು ಗುರುತಿಸಲಾಗಿದೆ.

ಪಾಟೀ ಸವಾಲು: ಆರೋಪಿ ಪರ ಶ್ರೀ ಡಿ ಕೆ ವಕೀಲರಿಂದ:

ದಿ.09.2.2020 ರಂದು ಆರೋಪಿ ತಾನಾಗಿಯೆ ಪೊ. ಠಾಣೆಗೆ ಬಂದಿದ್ದನು. ಆತ ಠಾಣೆಗೆ ಹಾಜರಾದ ನಂತರ ಆರೋಪಿ ಇಂದ ಕೋರಿಕೆ ಸಹಿಗಳನ್ನು ನಾನು ಪಡೆದಿದ್ದೇನೆ. ಎಷ್ಟು ಕೋರಿಕೆ ಸಹಿಗಳನ್ನು ಪಡೆದಿದ್ದೇನೆ ಎಂದರೆ ನೆನಪಿಲ್ಲ. ಕೋರಿಕೆ ಸಹಿಗಳನ್ನು ಪಡೆಯುವಾಗ ಮಹಜರ ಮಾಡಿದ್ದೇನೆ. ಪಂಚರಾದ ಚಾಸಾ10 ಮತ್ತು 11 ರವರನ್ನು ಎಲ್ಲಿಂದ ಯಾರನ್ನು ಕರೆಸಿದ್ದರು ಎಂದರೆ ನೆನಪಿಲ್ಲ. ಅವರಿಗೆ ನೋಟಿಸ ಜಾರಿಗೊಳಿಸಿದ್ದೇನೆ. ಕೋರಿಕೆ ಸಹಿಗಳನ್ನು ಠಾಣೆಯಲ್ಲಿದ್ದ ಬಿಳಿ ಕಾಗದದ ಮೇಲೆ ಪಡೆದಿದ್ದೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಕೋರಿಕೆ ಪತ್ರಗಳನ್ನು ಆರೋಪಿ ಬರೆದಿದ್ದಾರೆ ಎಂದು ಗೊತ್ತಾಗಿದೆ. ಯಾವಾಗ ಮತ್ತು ಎಲ್ಲಿ ಎಂದು ಗೊತ್ತಿಲ್ಲ. ಕೋರಿಕೆ ಪತ್ರದಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಚಾಸಾ13 ವತ್ತು 14ರವರಿಗೆ ಮಹಜರ ಮಾಡುವ ಕಾಲಕ್ಕೆ ನೋಟಿಸ ಕೊಡಲಾಗಿತ್ತು ಆದರೆ ಅವರನ್ನು ಎಲ್ಲಿಂದ ಕರೆದುಕೊಂಡು ಬರಲಾಂತು ಎಂದರೆ ಗೊತ್ತಿಲ್ಲ. ಚಾಸಾ.13,14 ಅಂಚೆ ಕಚೇರಿ ನೌಕರರು ಎಂದರೆ ಸರಿ.

ಪಿ ಎಫ ನಂ. 105/2019ರ ಮಾಲು ಪಟ್ಟಿಯಲಿನ ಚಾಸಾ22 ರವರು ವಶಪಡಿಸಿಕೊಂಡಿದ್ದರು. ಸದರಿ ಮಾಲು ಪಟ್ಟಿಯಲ್ಲಿ ವಶಪಡಿಸಿಕೊಳ್ಳಲಾದ ಸ್ವತ್ತುಗಳನ್ನು ನಾನು ಪರಿಶೀಲಿಸಿದ್ದೇನೆ. ಹೆಚ್ ಜೆ ಕೆ ಎಲ್ ಎಂ ಎನ ಪಿ ಆರ್ ಎಸ ದಾಖಲೆಗಳಲ್ಲಿ ಏನೆಲ್ಲ ಬರೆಯಲಾಗಿದೆ ಎಂದರೆ ಸಾಕ್ಷಿ ಅಂಚೆ ಇಲಾಖೆಯಲ್ಲಿನ ಲೆಕ್ಕ ಪತ್ರಗಳ ಬಗ್ಗ ಮಾಹಿತಿ ಇದೆ ಎಂದು ನುಡಿಯುತ್ತಾರೆ. ಆ ಪುಸ್ತಕಗಳ ಮೇಲೆ ನನ್ನ ಸಹಿ ಇಲ್ಲ. ದಿ. 10.12.2020 ರಂದು ಚಾಸಾ12ರವರು ಜರ್ನಲ್ ಪುಸ್ತಕ ಹಾಜರುಪಡಿಸಿದರು. ಎಷ್ಟು ಡಿ ಜರ್ನಲ ಪುಸ್ತಕ ಹಾಜರುಪಡಿಸಿದ್ದರು ಎಂದರ ಗೊತ್ತಿಲ್ಲ. ಚಾಸಾ15 ವತ್ತು 16 ಪಂಚಸಾಕ್ಷಿಗಳು ಅಂಚೆ ಇಲಾಖೆಯ ಸಿಬ್ಬಂದಿಗಳು ಎಂದರೆ ನೆನಪಿಲ್ಲ. ನಿಪಿ72ರಲ್ಲಿಕಾಣವ ನಾನು ಪಡೆದಿದ್ದೇನೆ ಎನ್ನಲಾದ ಸಹಿಗಳು ಆರೋಪಿಯ ಸಹಿಗಳು ಅಂದರೆ ಸರಿಯಲ್ಲ. ನಿ ಪ್ರ 1 ರಿಂದ 12ರಲ್ಲಿ ಕಾಣುವ ಸಹಿಗಳು ಆರೋಪಿಯದ್ದು ಅಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ದಿ.09.2.2020ರಂದು ಆರೋಪಿ ಠಾಣೆಗೆ ಹಾಜರಾಗಿ ಯಾವುದೇ ಕೋರಿಕೆ ಸಹಿಗಳನ್ನು ನನ್ನ ಸಮಕ್ಷಮ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಗುರುತಿಸಿರುವ ದಾಖಲೆಗಳಿಗೂ ಹಾಗೂ ಆರೋಪಿಗೂ ಯಾವದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಅಂಚೆ ಕಚೇರಿಯವರು ಸೃಷ್ಟಿಸಿರುವ ಸುಳ್ಳು ಪ್ರಕರಣದಲ್ಲಿ ಅವರು ನೀಡಿದ ಸುಳ್ಳು ದಾಖಲೆಗಳನ್ನು ಪಡೆದು ಯಾವದೇ ತನಿಖೀ ಮಾಡದೇ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.
ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.